ಅದರ ಪರಿಮಳದ ಮೋಡಿಯಲ್ಲಿ ಏನು ಕೇಳಿಸಿಕೊಳ್ಳುತ್ತೇನೋ, ಏನನ್ನು ಅರ್ಥೈಸಿಕೊಳ್ಳುತ್ತೇನೋ ನನಗೇ ತಿಳಿಯದು. ಅವರ ಚಿತ್ತಾಕರ್ಷಕ ಮಾತು ಬೆರಗುಗೊಳಿಸುವ ವ್ಯಕ್ತಿತ್ವ ನನ್ನ ಸುತ್ತ ಒಂದು ರೀತಿಯ ವರ್ತುಲವನ್ನೇ ನಿರ್ಮಿಸಿಬಿಟ್ಟಿವೆ. ನಾನು ಕಣ್ಣು ಮುಚ್ಚಿ ಕಣ್ಣು ತೆರೆದು ಕೇವಲ ಅವುಗಳ ಬಗ್ಗೆಯೇ ಯೋಚಿಸುತ್ತಿರುತ್ತೇನೆ. ಈ ನನ್ನ ಅಪರಾಧಕ್ಕಾಗಿ ಅಲ್ಲಾಹುವಿನಲ್ಲಿ ಅದೆಷ್ಟೋ ಸಾರಿ ಕ್ಷಮೆ ಯಾಚಿಸಿಯೂ ಇದ್ದೇನೆ. ಆದರೆ ನನ್ನ ಮನದೊಳಗಿನ ಒಳ ಕೋಣೆಯಿಂದ ಜಿಗಿದು ಹೊರಬಂದು ಧುತ್ತನೆ ಅದು ಹೇಗೆ ನನ್ನೆದುರು ನಿಂತುಬಿಟ್ಟಿದ್ದಾರೆ? ಇದರಲ್ಲಿ ನನ್ನದೇನು ತಪ್ಪು ಇದೆ?...

ಮೂರು ವರ್ಷಗಳು ಮೂರೇ ಕ್ಷಣಗಳ ಹಾಗೆ ರೆಕ್ಕೆ ಹಚ್ಚಿಕೊಂಡಂತೆ ಹಾರಿಹೋದವು. ಬಳಿಕ ಕೆಲವೇ ಕೆಲವು ಭೇಟಿಯ ಸಂದರ್ಭಗಳು. ಆದರೂ ಅವರ ಸಾಮಿಪ್ಯ ನನ್ನೊಳಗೆ ಒಂದು ರೀತಿಯ ವಿಚಿತ್ರ ಧೈರ್ಯವನ್ನುಂಟುಮಾಡಿತು. ಆಕರ್ಷಕ ಉಡುಪು ಕಣ್ಣು ಕಪ್ಪು, ತೆಳುವಾದ ಲಿಪ್‌ಸ್ಟಿಕ್ ಉಂಗುರ, ಲೋಲಕ್ಕು... ಎಲ್ಲದಕ್ಕಿಂತ ಆ ನಿಲುಗನ್ನಡಿ... ಎಲ್ಲವೂ ನನ್ನದೇ ಸ್ವತ್ತಿನಂತಾಗಿ ಬಿಟ್ಟವು. ಮಾತು ಮಾತಿಗೆ ಮುಗುಳ್ನಗು ತೆಳುವಾದ ನಗು ಎಲ್ಲವೂ ಅಭ್ಯಾಸವಾಗಿ ಬಿಟ್ಟವು. ಅಮ್ಮನ ಫೋನು ಬಂದರೆ ಮಾತಾಡಲೇಬೇಕಾದ ಕಾರಣಕ್ಕೆ ಒಂದಿಷ್ಟು ಮಾತಾಡಿ ಇಟ್ಟುಬಿಡುತ್ತೇನೆ. ಅಮ್ಮನ ನಂಬಿಕೆಯನ್ನು ಹುಸಿಗೊಳಿಸುವುದು ಅಷ್ಟು ಸುಲಭವಲ್ಲ. ರಜೆಯಲ್ಲಿ ಅಮ್ಮ ಕರೆದಾಗಲೆಲ್ಲಾ ಕೆಲಸದ ಒತ್ತಡದ ನೆಪ ಹೇಳಿ ಬಿಡುತ್ತೇನೆ. ಬಹುಶಃ ನಾನು ಅಮ್ಮನಿಗೆ ಜೀವಮಾನದಲ್ಲಿಯೇ ಮೊದಲ ಬಾರಿಗೆ ಮೋಸ ಮಾಡುತ್ತಿದ್ದೇನೆ. ಆದರೆ ನನ್ನ ಮನದಾಳದ ಪಿಸು ಮಾತನ್ನು ಕೇಳುವುದು ನನಗೆ ತಪ್ಪು ಎನಿಸಲಿಲ್ಲ.

★★★

ನಾಳೆ ಪ್ರಾಂಶುಪಾಲರ ಕಡೆಯಿಂದ ಸ್ಕೂಲಿನ ಸಹೋದ್ಯೋಗಿಗಳಿಗೆ 'ಟೀಪಾರ್ಟಿ' ಏರ್ಪಾಡಾಗಿದೆ. ನನಗಂತೂ ರಾತ್ರಿಯಿಡೀ ತೆರೆದು ಕಣ್ಣುಗಳೊಳಗೇ ಕರಗಿ ಹೋಯಿತು.

ಬೆಳಗ್ಗೆ ಮಕ್ಕಳು ಶಾಲೆಗೆ ಹೋದ ಬಳಿಕ ನಾನು ಅಲಮೇರಾದ ಮೇಲೆ ಇರಿಸಿದ್ದ ರೇಷ್ಮೆ ಸೀರೆಗಳ ಗಂಟನ್ನು ಕೆಳಗಿಳಿಸಿದೆ. ಅದರಿಂದ ಗುಲಾಬಿ ಬಣ್ಣದ ಕಾಂಜಿವರಂ ಸೀರೆಯನ್ನು ತೆಗೆದು ಬೇಗ ಬೇಗ ಇಸ್ತ್ರಿಮಾಡಿದೆ.

ಸಂತಸದ ಸಂದರ್ಭಗಳಲ್ಲಿ ಇಂತಹ ಬಣ್ಣದ ಸೀರೆಗಳೇ ಹೆಚ್ಚು ಖುಷಿ ನೀಡುತ್ತವೆ. ಬ್ಲೌಸ್ ಧರಿಸಿ ನೋಡಿದೆ. ಮನಸ್ಸು ಖುಷಿಯಿಂದ ಉಬ್ಬಿಹೋಯಿತು. ಏಳು ವರ್ಷಗಳು ಕಳೆದರೂ ಇಂದಿಗೂ ಫಿಟ್ನೆಸ್ ಹಾಗೆಯೇ ಇದೆ. ಸೀರೆಯ ಸೆರಗನ್ನು ಭುಜದ ಮೇಲೆ ಹರಡಿ ಅದಕ್ಕೆ ಪಿನ್ ಮಾಡಿ ಸರಿಯಾಗಿ ಕೂರಿಸಿ ಕನ್ನಡಿಯಲ್ಲೊಮ್ಮೆ ನೋಡಿಕೊಂಡೆ... ಇದು ನಾನೆಯೋ... ಎಂಬ ಸಂಶಯ ಎದುರಾಯಿತು.

ಸೀರೆಯ ಗುಲಾಬಿ ರಂಗು ಮುಖದ ಕೆಂಬಣ್ಣದ ಮುಂದೆ ಮಂಕಾಯಿತು. ಕಾಡಿಗೆ ಹಚ್ಚಿದ ಕಣ್ಣುಗಳು, ಮಾಮೂಲಿಗಿಂತ ಸ್ವಲ್ಪ ಜಾಸ್ತಿಯೇ ಅನ್ನುವ ಹಾಗೆ ಲಿಪ್‌ಸ್ಟಿಕ್, ಕಿವಿ, ಕುತ್ತಿಗೆ ಎಲ್ಲ ತುಂಬಿವೆ ಆದರೆ ಮೂಗು ಮಾತ್ರ ಖಾಲಿ... ಖಾಲಿ!...

ಅರೆ, ಇಂದೇಕೆ ನಾನು ಆ ವಜ್ರದ ಮೂಗುತಿಯನ್ನು ಧರಿಸಬಾರದು? ಕೂಡಲೆ ಸೇಫ್‌ಲಾಕರ್‌ನಿಂದ ಒಡವೆಗಳ ಬಾಕ್ಸ್ ತೆಗೆದು ಅದರಿಂದ ಹೊಳೆಯುವ ಮೂಗುತಿಯ ಕವರ್ ತೆಗೆದುಕೊಂಡೆ ದೊಡ್ಡದೆಂದು ಅಂದು ಇದನ್ನು ಕತ್ತರಿಸಿಬಿಟ್ಟಿದ್ದರೆ ಇವತ್ತು ನನ್ನ ಆಸೆ ಪೂರ್ತಿಯಾಗುತ್ತಲೇ ಇರಲಿಲ್ಲ. ಛೇ!... ಈ ವ್ಯರ್ಥ ಯೋಚನೆ ಈಗೇಕೆ? ಮೂಗಿಗೆ ಮೂಗುತಿಯನ್ನು ಧರಿಸಿ ಕನ್ನಡಿಯಲ್ಲೊಮ್ಮೆ ನೋಡಿಕೊಂಡಾಗ ನಾನೇ ನಾಚಿ ನೀರಾಗಿಬಿಟ್ಟೆ.

ಯಾ... ಅಲ್ಲಾ!... ಇದೇನು ಚಿತ್ತಾಕರ್ಷಕ ಮೂಗುತಿಯ ಹೊಳಪೇ!... ಅಥವಾ ಅವರ ಆಕರ್ಷಣೆಯ ಸೆಳೆತವೇ... ತೋಬಾ... ತೋಬಾ!... ಮತ್ತೆ ಮಕ್ಕಳು!... ಮಕ್ಕಳು ಸ್ಕೂಲಿನಿಂದ ಮನೆಗೆ